"ನಿಮಗೆ ಯಾವುದು ಬೇಕೋ ಅದನ್ನು ತೆಗೆದುಕೊಳ್ಳಿ."

"ಸೋ ಸ್ವೀಟ್."

"ಇಲ್ಲ ಕಹಿಯಾಗೆ ಇರುತ್ತೆ."

"ಯಾವಾಗಲೂ ಇಷ್ಟು ಶಾರ್ಪಾ ನೀವು?"

"ಯಾವಾಗಲೂ ಹೆಂಗಸರಿಗೆ ಬಹಳ ಕಾಂಪ್ಲಿಮೆಂಟ್ ಕೊಡ್ತೀರೋ?"

"ಫ್ಲರ್ಟ್ ಮಾಡ್ತಾ ಇದ್ದೀನಿ ಅಂತ ಪಾಲಿಷ್ಡ್ ಆಗಿ ಕೇಳ್ತಾ ಇದ್ದೀರಾ?"

"ಇಲ್ಲಾಂತಾ ಹೇಳಕ್ಕೆ ಆಗ್ತಿಲ್ಲಾ..."

"ನಿಜ ಹೇಳಬೇಕಂದ್ರೆ, ನಾನು ಮಾತಾಡೋವಾಗ ಯಾರಾದ್ರೂ ಚಾಲೆಂಜಾಗಿ ರಿಪ್ಲೈ ಮಾಡೋರನ್ನ ಕಂಡ್ರೆ ನನಗೆ ಹಿಡಿಸುತ್ತೆ. ನಾನು ಉತ್ತರ ಕೊಡೋದಿಕ್ಕೆ ಆಗದಷ್ಟು ಸ್ಮಾರ್ಟ್ ಆಗಿ ಉತ್ತರ ಇದ್ರೆ ತುಂಬಾ ಇಷ್ಟಪಡ್ತೀನಿ. ಅದು ಗಂಡಾಗಿದ್ರೂ ಸರಿ! ಹೆಣ್ಣಾಗಿದ್ರೂ ಸರಿ!

"ಮ್..."

"ಇದರಲ್ಲಿ ಹೆಂಗಸರಿಗೆ ನಾರ್ಮಲ್ಲಾಗಿ ಮೀಸಲಾತಿ ಜಾಸ್ತಿ. ಅದು ಜೆನಟಿಕ್ ವೀಕ್ನೆಸ್."

"ಹೆಚ್ಚಿನ ಗಂಡಸರು ಬುದ್ಧಿವಂತಿಕೆಯಿಂದ ಉತ್ತರ ಕೊಡೋ ಹೆಣ್ಣನ್ನ ರಸಿಕತೆಯಿಂದ ನೋಡೋದಿಲ್ಲ ಅಲ್ವಾ?" ಎಂದು ಕೇಳಿದಾಗ, "ಇದು ಒಂದು ಸಾರ್ವಜನಿಕ ಅಭಿಪ್ರಾಯ. ಈಗ ನೋಡಿ..." ಎಂದು ಪ್ರಾರಂಭಿಸಿ ಉಸಿರು ಹಿಡಿದುಕೊಂಡು ಒಂದು ಲೆಕ್ಚರ್ ಮಾಡಿದ.

ಅವನ ಲೆಕ್ಚರ್ ಕೇಳಿ, "ಕಾಫಿಗೆ ಬದಲು ಸೋಡಾ ಹೇಳಬಹುದಿತ್ತಲ್ಲ?" ಎಂದೆ.

"ಹಾ... ಹ... ಹಾ... ನಾನು ಹೇಳಿದ್ದಕ್ಕೆ ಒಪ್ಪಿಗೆಯೇ ಇಲ್ಲವೇ ಅಂತ ಉತ್ತರ ಹೇಳದೇ ಟಾಪಿಕ್ ಬದಲಾಯಿಸುತ್ತಿದ್ದೀರಿ ಅಲ್ಲವೇ, ಅದೇ ನಿಮ್ಮ ಸ್ಮಾರ್ಟ್‌ನೆಸ್..." ಎಂದು ನನ್ನನ್ನು ಹೊಗಳಿದ. ಅದರ ನಂತರ ಹಾಬೀಸ್, ಸಿನಿಮಾ, ಬುಕ್ಸ್, ಪಯಣ, ಡ್ರೆಸ್ಸಿಂಗ್ ಸೆನ್ಸ್, ಬೀತೋವನ್ ಮೊದಲುಗೊಂಡು ಬೀಪ್ ಹಾಡುಗಳವರೆಗೆ ಕಲಸಿ ಕುಡಿದಾಗ, ಹೆಚ್ಚುಕಡಿಮೆ ಒಂದೂವರೆ ಗಂಟೆ ಕಾಫಿಯ ಹಬೆಯಂತೆ ಹಾರಿಹೋಯಿತು.

"ನೈಸ್ ಕಾಫಿ, ಒಳ್ಳೆಯ ಟೇಸ್ಟ್ ನಿಮಗೆ, ಎಲ್ಲದರಲ್ಲೂ."

"ಥ್ಯಾಂಕ್ಸ್. ಲೇಟ್ ಆಯ್ತಾ ನಿಮಗೆ?" ಕೇಳಿದೆ.

"ಹೌದು, ಫ್ರೆಂಡ್ಸ್ ಕಾಯುತ್ತಿರುತ್ತಾರೆ. ಹೊರಡ್ತೀನಿ..."

"ಮ್."

ಕಾಫೀ ಶಾಪಿನ ಹೊರಗೆ ಬಂದು ಹೊಸ್ತಿಲಲ್ಲಿ ನಿಂತ. ಕತ್ತಲಾಗಲು ತೊಡಗಿತು, ಸಣ್ಣನೆ ಚಳಿಯೊಂದಿಗೆ.

"ಮಳೆ ಬರುವ ಹಾಗಿದೆ ಅಲ್ಲವೇ" ಎಂದೆ ಆಕಾಶ ನೋಡಿ.

"ಹೌದು, ನಾನು ಹೊರಡಲೇನ್ರೀ?" ಕೇಳಿದ.

"ಮ್ ಸರಿ. ನಾನೂ ಮನೆಗೆ ಹೋಗಬೇಕು. ಭಯಂಕರ ಟ್ರಾಫಿಕ್ ಇರುತ್ತೆ ಈ ಹೊತ್ತಲ್ಲಿ..."

"ಹೌದು, ಮೆಟ್ರೊ ಕೆಲಸ ನಡೆಯುತ್ತಿದೆ ಅಲ್ಲಾ..." ಎಂದು ಅವನು ಹೇಳಿದಾಗ, "ಚೆನ್ನೈಯಲ್ಲಿ ಕಾರು ಬೈಕು ಎಲ್ಲಾ ಜಾಸ್ತಿ ಆಗೋಯ್ತು..." ಎಂದೆ.

ಬೆಳಗಿನ ಇದೇ ಸಂಭಾಷಣೆ ಬೇರೆ ಜಾಗದಲ್ಲಿ ಆಗಿದ್ದನ್ನು ಅರಿತು ಇಬ್ಬರೂ ಜೋರಾಗಿ ನಕ್ಕೆವು.

"ತಡೀರಿ, ಪಕ್ಕದಲ್ಲಿ ಎಲ್ಲಾದರೂ ಆಟೊ ಸ್ಟ್ಯಾಂಡ್ ಇದ್ದರೆ ಡ್ರಾಪ್ ಮಾಡ್ತೀನಿ."

"ಸರಿ ಕಣ್ರೀ..." ಎಂದು ತಲೆಯಾಡಿಸಿ ಹೇಳಿದ.